# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1286 |
| ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ.ಗೌಡ |
| ಉತ್ತರಿಸುವ ದಿನಾಂಕ | 17.12.2025 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿರಾ ತಾಲ್ಲೂಕು ಚಿಕ್ಕನಹಳ್ಳಿಯ ದಾನಿ ಶ್ರೀ ಉಗ್ರೇಗೌಡರು ತುಮಕೂರು ಜಿಲ್ಲಾ ಖಜಾನೆಯಲ್ಲಿ ಮಹಾರಾಜರ ಸರ್ಕಾರದ ಆದೇಶ ಸಂಖ್ಯೆ 2440-2 MUZ 675-09-04, ದಿನಾಂಕ:24.03.1911 ರಲ್ಲಿ ರೂ.24,000/- ಗಳ ಮೂಲಧನವನ್ನು ಸರ್ಕಾರದಲ್ಲಿ ಠೇವಣಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಯಾವ ಉದ್ದೇಶಕ್ಕೋಸ್ಕರ ಈ ಠೇವಣಿ ಇಡಲಾಗಿದೆ; (ಮಾಹಿತಿ ನೀಡುವುದು) | ಶಿರಾ ತಾಲ್ಲೂಕು ಚಿಕ್ಕನಹಳ್ಳಿಯ ದಾನಿ ಶ್ರೀ ಉಗ್ರೇಗೌಡರು ತುಮಕೂರು ಜಿಲ್ಲಾ ಖಜಾನೆಯಲ್ಲಿ ಮಹಾರಾಜರ ಸರ್ಕಾರದ ಆದೇಶ ಸಂಖ್ಯೆ:2440-2 24.03.1911 ರಲ್ಲಿ ಕೃಷ್ಣ ರಾಜೇಂದ್ರ ವ್ಯವಸಾಯ ಧರ್ಮ ಪಾಠ ಶಾಲೆ ಮಕ್ಕಳ ಶಿಕ್ಷಣಕ್ಕಾಗಿ ಠೇವಣಿ ಇಟ್ಟಿರುವ ಬಗ್ಗೆ ಶಿರಾ ತಾಲ್ಲೂಕು ಕಛೇರಿ / ತುಮಕೂರು ಜಿಲ್ಲಾ ಖಜಾನೆಯಲ್ಲಿ ದಾಖಲಾತಿ ಲಭ್ಯವಿರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಇವರು ಮಾಹಿತಿ ಸಲ್ಲಿಸಿರುತ್ತಾರೆ. |
| ಆ) | 1922 ರಿಂದ ಇಲ್ಲಿಯವರೆವಿಗೂ ಯಾವ ಯಾವ ಸಾಲಿನಲ್ಲಿ ಈ ಠೇವಣಿ ಹಣದ ಒಟ್ಟು ಬಡ್ಡಿ ಹಣವನ್ನು ಯಾವ ಇಲಾಖೆಯವರು ಯಾವ ಉದ್ದೇಶಕ್ಕೆ ಹಣವನ್ನು ವಿನಿಯೋಗಿಸಿರುತ್ತಾರೆ; (ಸಂಪೂರ್ಣ ಮಾಹಿತಿ ನೀಡುವುದು) | ಉಂಬಳಿಗಳ ಮೇಲಿನ ಬಡ್ಡಿ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ:2049-03-107-1-00(240ಸಿ) ಇದರಡಿ ಆರ್ಥಿಕ ಇಲಾಖೆಯಿಂದ ಮಂಜೂರಾಗಿ ಬಿಡುಗಡೆಯಾಗುತ್ತಿದ್ದ ಅನುದಾನವನ್ನು ಅಧೀನ ಕಛೇರಿಗಳು/ಇತರೆ ಇಲಾಖೆಗಳಿಗೆ ಬೇಡಿಕೆ ಪ್ರಸ್ತಾವನೆಯನ್ವಯ ಸಂಬಂಧಪಟ್ಟ ಸಂಸ್ಥೆಗಳಿಗೆ ಪಾವತಿ ಮಾಡುವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗುತ್ತಿತ್ತು.<br><br>ಸದರಿ ಲೆಕ್ಕ ಶೀರ್ಷಿಕೆಯಡಿ 2015-16ನೇ ಸಾಲಿನಿಂದ ಬೇಡಿಕೆಗನುಗುಣವಾಗಿ ಆರ್ಥಿಕ ಇಲಾಖೆಯಿಂದ ಅನುದಾನ ಬಿಡುಗಡೆಯಾಗದೆ ಇದ್ದು, ಠೇವಣಿ ಇರಿಸಿರುವ ಬಗ್ಗೆ ದಾಖಲೆ/ಬಾಂಡ್‌ಗಳನ್ನು ಒದಗಿಸುವಂತೆ ಆರ್ಥಿಕ ಇಲಾಖೆಯಿಂದ ಸೂಚಿಸಿದ್ದು, ಅದರನ್ವಯ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಕಛೇರಿ/ ಸಾರ್ವಜನಿಕ ಶಿಕ್ಷಣ ಇಲಾಖೆ/ಸೈನಿಕ ಕಲ್ಯಾಣ ಮತ್ತು ಪುನರ್ ವಸತಿ ಇಲಾಖೆಗಳಿಗೆ ಪತ್ರ ಬರೆದು ಅಗತ್ಯವಿರುವ ಮಾಹಿತಿ/ದಾಖಲೆಗಳನ್ನು ಒದಗಿಸಲು ಕೋರಲಾಗಿರುತ್ತದೆ.<br><br>2014-15 ನೇ ಸಾಲಿನವರೆವಿಗೂ ಬಿಡುಗಡೆ ಮಾಡಿರುವ ಅನುದಾನಕ್ಕೆ ಸಂಬಂಧಿಸಿದಂತೆ ಯಾವ ಉದ್ದೇಶಕ್ಕೆ / ಯಾವ ಸಂಸ್ಥೆಗಳಿಗೆ ವಿನಿಯೋಗ ಮಾಡಿಕೊಳ್ಳಲಾಗಿದೆ ಎಂಬ ಬಗ್ಗೆ ವಿವರಗಳನ್ನು ಒದಗಿಸುವಂತೆ ಕೋರಿ ಜಿಲ್ಲಾಧಿಕಾರಿಗಳು, |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ತುಮಕೂರು ಜಿಲ್ಲೆ ಹಾಗೂ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಪತ್ರ ಬರೆಯಲಾಗಿರುತ್ತದೆ. ಸದರಿಯವರಿಂದ ಈವರೆವಿಗೂ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ. |
| ಇ) | ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಈ ಠೇವಣಿ ಹಣದ ಬಡ್ಡಿಯನ್ನು ಶ್ರೀ ಉಗ್ರೇಗೌಡರ ಮೂಲ ಉದ್ದೇಶದಂತೆ ಚಿಕ್ಕನಹಳ್ಳಿಯ ಸರ್ಕಾರಿ ಶ್ರೀ ಕೃಷ್ಣರಾಜೇಂದರ ವ್ಯವಸಾಯ ಧರ್ಮ ಪಾಠ ಶಾಲೆಯ (ಎಸ್.ಕೆ.ವಿ.ಡಿ) ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ವಿನಿಯೋಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಠೇವಣಿ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಸಂಬಂಧಪಟ್ಟ ಸಂಸ್ಥೆ/ ಆಯಾಯ ಇಲಾಖೆ/ಅಧೀನ ಕಛೇರಿಯಿಂದ ಸಲ್ಲಿಸಿದ್ದಲ್ಲಿ, ನಿಯಮಾನುಸಾರ ಪರಿಶೀಲಿಸಿ ಸರ್ಕಾರದಿಂದ ಬಡ್ಡಿ ಹಣವನ್ನು ಬಿಡುಗಡೆ ಮಾಡುವ ಕುರಿತು ಪರಿಶೀಲಿಸಲಾಗುತ್ತದೆ. |

ಸಂಖ್ಯೆ: ಕಂಇ 246 ಮುಸಪು 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು